# ಉಪತಹಶೀಲ್ದಾರರ ನ್ಯಾಯಾಲಯ, ನಾಡಕಛೇರಿ, ಕಮಲಾಪುರ,

## ಹೊಸಪೇಟೆ ತಾಲೂಕು-583221.

ಎ.ವಿಲೇ.ನಂ.ಕಂ/ನಾ.ಕ.ಕ/ಪಹಣಿ/ತಕರಾರು/83/2015-16 ದಿನಾಂಕ: 29.09.2016.

ಉಪಸ್ಥಿತರು: ಉಪತಹಶೀಲ್ದಾರರು,

ನಾಡಕಛೇರಿ, ಕಮಲಾಪುರ.

*****

**ವಾದಿಗಳು ಶ್ರೀ/ಶ್ರೀಮತಿ:**

1]ಶ್ರೀಮತಿ ಯು.ಹನುಮಂತಮ್ಮ ಗಂಡ ನಾಗಪ್ಪ,
ನೀಲಪ್ಪ ಕ್ಯಾಂಪ್ ಹಾಗೂ ಬಸವೇಶ್ವರ ನಗರ,
ಮದಿರೆ ಗ್ರಾಮ, ಬಳ್ಳಾರಿ ತಾಲೂಕು.

2]ಶ್ರೀ ಕೆ.ರೇವಣಪ್ಪ ತಂದೆ ಚಿದಾನಂದಪ್ಪ, ವಾಸ:
3ನೇ ವಾರ್ಡ್, ಗಾದಿಗನೂರು ಗ್ರಾಮ,
ಹೊಸಪೇಟೆ ತಾಲೂಕು.

**ಪ್ರತಿವಾದಿಗಳು ಶ್ರೀ/ಶ್ರೀಮತಿ:**

1]ಶ್ರೀಮತಿ ಗಂಗಮ್ಮ ಗಂಡ ನಾಗಪ್ಪ, ವಾಸ: ಗಾದಿಗನೂರು
ಗ್ರಾಮ, ಹೊಸಪೇಟೆ ತಾಲೂಕು.

2] ಶ್ರೀಮತಿ ಗೌರಮ್ಮ ಗಂಡ ಸಿದ್ದಪ್ಪ, ವಾಸ:ಶ್ರೀಧರಗಡ್ಡೆ,
ಬಳ್ಳಾರಿ ತಾಲೂಕು, ಬಳ್ಳಾರಿ ಜಿಲ್ಲೆ.

**ವ್ಯಾಜ್ಯದ ಜಮೀನು:**

| ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|
| ಹೊಸಪೇಟೆ | ಭುವನಹಳ್ಳಿ | 42/ಬಿ2 (ಪ್ರ) | 01.20 |

**ಪೀಠಿಕೆ:**

ಹೊಸಪೇಟೆ ತಾಲೂಕು, ಭುವನಹಳ್ಳಿ ಗ್ರಾಮದ ಸ.ನಂ.42/ಬಿ2 ವಿಸ್ತೀರ್ಣ: 02 ಎಕರೆ 48 ಸೆಂಟ್ಸ್ ಪೈಕಿ ವಿಸ್ತೀರ್ಣ 01 ಎಕರೆ 20 ಸೆಂಟ್ಸ್ ಜಮೀನನ್ನು ಹೊಸಪೇಟೆ ತಾಲೂಕಿನ ಗಾದಿಗನೂರು ನಿವಾಸಿಯಾದ ವಾದಿ-2 ರವರು ದಿನಾಂಕ: 08.12.2015 ರ ನೋಂದಾಯಿತ ಕ್ರಯ ಪತ್ರ ಸಂಖ್ಯೆ: 5046/2015-16 ರನ್ವಯ ವಾದಿ-1 ರವರಿಂದ ಕ್ರಯಕ್ಕೆ ಪಡೆದಿದ್ದು, ಅದರಂತೆ ವ್ಯಾಜ್ಯದ ಜಮೀನನ್ನು ಕ್ರಯದಾರರಾದ ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಹಕ್ಕುಬದಲಾವಣೆ ಸಂಖ್ಯೆ: H11/2015-16 ರಡಿ ಪ್ರಕ್ರಿಯೆ ಜರುಗಿಸಲಾಗಿರುತ್ತದೆ. ತದನಂತರ ಈ ಬಗ್ಗೆ ಗ್ರಾಮಲೆಕ್ಕಿಗರು, ಭುವನಹಳ್ಳಿ ಇವರು ನಮೂನೆ-21 ರ ನೋಟೀಸನ್ನು ಗ್ರಾಮದಲ್ಲಿ ಪ್ರಚುರಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ, ಹೊಸಪೇಟೆ ತಾಲೂಕು ಗಾದಿಗನೂರು ಗ್ರಾಮದವರಾದ ಪ್ರತಿವಾದಿ-1 ಹಾಗೂ ಶ್ರೀಧರಗಡ್ಡೆ, ಬಳ್ಳಾರಿ ತಾಲೂಕಿನವರಾದ ಪ್ರತಿವಾದಿ-2 ರವರು ನಿಗದಿತ ಅವಧಿಯೊಳಗೆ ದಿನಾಂಕ: 30.12.2015 ರಂದು ತಕರಾರು ಅರ್ಜಿ ಸಲ್ಲಿಸಿರುವುದರಿಂದ, ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು, ವಿಚಾರಣೆ ಮಾಡುವುದಕ್ಕಾಗಿ ಉಭಯ ಪಕ್ಷದವರಿಗೂ ನೋಟೀಸ್ ನೀಡಿ ದಿನಾಂಕ: 17.03.2016 ರಂದು ವಿಚಾರಣೆ ಪ್ರಾರಂಭಿಸಲಾಯಿತು.

ವಿಚಾರಣೆ ಸಮಯದಲ್ಲಿ, ಉಭಯ ಪಕ್ಷಗಾರರು ಹಾಜರಾಗಿರುತ್ತಾರೆ. ಈ ಸಂದರ್ಭದಲ್ಲಿ ಪ್ರತಿವಾದಿ-1 ಮತ್ತು 2 ರವರು ದಿನಾಂಕ: 12.05.2016 ರ ವಿಚಾರಣೆ ಸಮಯದಲ್ಲಿ ಹಾಜರಾಗಿ ತಾವು ಗ್ರಾಮದ ಹಿರಿಯರ ಸಮ್ಮುಖದಲ್ಲಿ ರಾಜಿಯಾಗಿದ್ದು, ಅದರಂತೆ, ವ್ಯಾಜ್ಯದ ಜಮೀನನ್ನು ನೋಂದಾಯಿತ ಕ್ರಯ ಪತ್ರ ಸಂಖ್ಯೆ: 5046/2015-16 ದಿನಾಂಕ: 08.12.2015 ರನ್ವಯ ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಒಪ್ಪಿಗೆ ಸೂಚಿಸುತ್ತಾ, ತಮ್ಮಗಳ ಯಾವುದೇ ತರಹದ ಆಕ್ಷೇಪಣೆ ಇಲ್ಲವೆಂದು ಆಕ್ಷೇಪಣೆ/ತಕರಾರನ್ನು ಹಿಂಪಡೆಯುತ್ತಿರುವುದಾಗಿ ದಿನಾಂಕ: 12.05.2016 ರ ಅಫಿಡವಿಟ್ ಮೂಲಕ ಹಾಗೂ ವಿಚಾರಣೆ ಸಮಯದಲ್ಲಿ ತಿಳಿಸುತ್ತಾ, ವ್ಯಾಜ್ಯದ ಜಮೀನನ್ನು ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ [illegible]

ಕಾರಣ, ಕಾರಣ, ಪ್ರತಿವಾದಿ-1 ಮತ್ತು 2 ರವರು ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಒಪ್ಪಿಗೆ ಸೂಚಿಸಿ ತಮ್ಮ ತಕರಾರನ್ನು ಹಿಂಪಡೆದು ರಾಜಿಯಾಗಿರುವುದರಿಂದ, ಹೊಸಪೇಟೆ ತಾಲ್ಲೂಕು, ಭುವನಹಳ್ಳಿ ಗ್ರಾಮದ ಸ.ನಂ:42/ಡಿ2 ವಿಸ್ತೀರ್ಣ 02 ಎಕರೆ 48 ಸೆಂಟ್ಸ್ ಪೈಕಿ ಕ್ರಯದ ವಿಸ್ತೀರ್ಣ 01 ಎಕರೆ 20 ಸೆಂಟ್ಸ್ ಜಮೀನನ್ನು ನೋಂದಾಯಿತ ಕ್ರಯ ಪತ್ರ ಸಂಖ್ಯೆ: 5046/2015-16 ದಿನಾಂಕ: 08.12.2015 ರನ್ವಯ ಕ್ರಯದಾರರಾದ ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಗಿನಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇಲೆ ಸದರಿ ತಕರಾರನ್ನು ವಜಾಗೊಳಿಸುತ್ತಾ, ಪ್ರತಿವಾದಿ - 1 ಮತ್ತು 2 ರವರು ದಿನಾಂಕ: 12.05.2016 ರ ಅಫಿಡವಿಟ್‌ನಲ್ಲಿ ಹಾಗೂ ದಿನಾಂಕ: 12.5.2016 ರ ವಿಚಾರಣೆ ಸಮಯದಲ್ಲಿ ನೀಡಿದ ಒಪ್ಪಿಗೆಯಂತೆ ಉಭಯವರು ರಾಜಿಯಾಗಿರುವುದರಿಂದ, ಹೊಸಪೇಟೆ ತಾಲ್ಲೂಕು, ಭುವನಹಳ್ಳಿ ಗ್ರಾಮದ ಸ.ನಂ.42/ಡಿ2 ವಿಸ್ತೀರ್ಣ: 02 ಎಕರೆ 48 ಸೆಂಟ್ಸ್ ಪೈಕಿ ವಿಸ್ತೀರ್ಣ 01 ಎಕರೆ 20 ಸೆಂಟ್ಸ್ ಜಮೀನನ್ನು ನೋಂದಾಯಿತ ಕ್ರಯ ಪತ್ರ ಸಂಖ್ಯೆ: 5046/2015-16 ದಿನಾಂಕ: 08.12.2015 ರನ್ವಯ ಕ್ರಯದಾರರಾದ ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈದಿನ ದಿನಾಂಕ: 29.09.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಉಪತಹಶೀಲ್ದಾರರು,
ನಾಡಕಛೇರಿ, ಕಮಲಾಪುರ.
ಹೊಸಪೇಟೆ ತಾಲ್ಲೂಕು.

ಪ್ರತಿಯನ್ನು:-
1]ವಾದಿ-1 ರವರಾದ ಶ್ರೀಮತಿ ಯು.ಹನುಮಂತಮ್ಮ ಗಂಡ ನಾಗಪ್ಪ, ನೀಲಪ್ಪ ಕ್ಯಾಂಪ್ ಹಾಗೂ ಬಸವೇಶ್ವರ ನಗರ, ಮುದಿರಿ ಗ್ರಾಮ, ಬಳ್ಳಾರಿ ತಾಲ್ಲೂಕು ಇವರಿಗೆ ಕಳುಹಿಸಲಾಗಿದೆ.
2]ವಾದಿ-2 ರವರಾದ ಶ್ರೀ ಕೆ.ದೇವಣ್ಣ ತಂದೆ ಚಿದಾನಂದಪ್ಪ, ವಾಸ: 3ನೇ ವಾರ್ಡ್, ಗಾದಿಗನೂರು ಗ್ರಾಮ, ಹೊಸಪೇಟೆ ತಾಲ್ಲೂಕು, ಇವರಿಗೆ ಕಳುಹಿಸಲಾಗಿದೆ.
3]ಪ್ರತಿವಾದಿ-1ರವರಾದ ಶ್ರೀಮತಿ ಗಂಗಮ್ಮ ಗಂಡ ನಾಗಪ್ಪ, ವಾಸ: ಗಾದಿಗನೂರು ಗ್ರಾಮ, ಹೊಸಪೇಟೆ ತಾಲ್ಲೂಕು, ಇವರಿಗೆ ಕಳುಹಿಸಲಾಗಿದೆ.
4] ಶ್ರೀಮತಿ ಗೌರಮ್ಮ ಗಂಡ ಸಿದ್ದಪ್ಪ, ವಾಸ:ಶ್ರೀಧರಗಡ್ಡೆ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರಿಗೆ ಕಳುಹಿಸಲಾಗಿದೆ.
5]ಭೂಮಿಕೇಂದ್ರ, ತಾಲ್ಲೂಕು ಕಛೇರಿ, ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
6]ಕಂದಾಯ ನಿರೀಕ್ಷಕರು, ಕಮಲಾಪುರ ಹೋಬಳಿ, ಕಮಲಾಪುರ ಇವರಿಗೆ ಸೂಕ್ತ ಕ್ರಮಕ್ಕಾಗಿ.
7]ಕಛೇರಿ ಕಡತಕ್ಕೆ.